# ವಿಚಾರಪರ್ವ

ವಿಚಾರ ಮಾಡುವುದು ಮನುಷ್ಯನ ಮೂಲಭೂತ ಗುಣ. ಪೂರ್ವಿಕರು ವಿಚಾರಗಳ ನೆಲೆಗಳ ಬಗೆಗೆ ತುಂಬಾ ಯೋಚಿಸಿದ್ದಾರೆ. ನಾವು ಈಗ 'ವಿಚಾರ' ಎಂಬುದನ್ನು ನಾನಾ ರೀತಿಗಳಲ್ಲಿಯೂ ನಾನಾ ಕ್ರಮಗಳಲ್ಲಿಯೂ ಬಳಸುತ್ತಿದ್ದೇವೆ. 'ರ್‍ಯಾಶನಲ್ ಥಿಂಕಿಂಗ್' ಎಂಬುದಕ್ಕೆ 'ವೈಚಾರಿಕತೆ' 'ವೈಚಾರಿಕ ಚಿಂತನೆ' ಎಂಬ ಅರ್ಥದ ನೆಲೆ ಪಶ್ಚಿಮದಿಂದ ಬಂದದ್ದುಂಟು. ನಾವು ವರ್ತಮಾನದಲ್ಲಿ ಅಂತೂ ಇಂತೂ ಎಂತೂ ವಿಚಾರಗಳ ಗೊಂದಲಗಳಲ್ಲಿಯೇ ಸದಾ ಬಿದ್ದು ಒದ್ದಾಡುತ್ತಿದ್ದೇವೆ. ವಿಚಾರಗಳನ್ನು ಇಂದ್ರಿಯ, ಮನಸ್ಸು, ಬುದ್ಧಿ ಎಂಬ ಕರಣತ್ರಯಗಳಿಂದ ಪರಾಮರ್ಶೆ ಮಾಡುತ್ತಿದ್ದೇವೆ. ಈ ಮೂರು ಕರಣಗಳಿಗೂ ಇತಿಮಿತಿಗಳುಂಟು!

ಇವು ಎಷ್ಟು ಪರಿಶುದ್ಧವಾದರೂ ಸಂಪೂರ್ಣ ಅರಿವನ್ನು ನಮಗೆ ಕೊಡಲಾರವು. ಏಕೆಂದರೆ: ಅವು ಪರಿಪೂರ್ಣಗಳಲ್ಲ, ಅಪೂರ್ಣಗಳೇ. ಅದರಿಂದಾಗಿ, ಎಷ್ಟು ಶಾಸ್ತ್ರವನ್ನು ತಿಳಿದಿರಲಿ, ಎಷ್ಟು ಕರ್ಮಗಳನ್ನು ಆಚರಿಸಲಿ, ಎಷ್ಟು ಹಿರಿಯರ ಸೇವೆ ಮಾಡುತ್ತಿರಲಿ ಸಂಶಯ ತಪ್ಪುವುದಿಲ್ಲ. ಈ ಸಂಶಯದ ಪಿಶಾಚಿಯು ನಮ್ಮನ್ನು ತಡೆಹಿಡಿದುಕೊಂಡಿದೆ. ಮುಂಡಕೋಪನಿಷತ್ತಿನಲ್ಲಿ 'ಭಿದ್ಯತೇ ಹೃದಯಗ್ರಂಥಿಃ ಛಿದ್ಯನ್ತೇ ಸರ್ವ ಸಂಶಯಾಃ ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' ಎಂದು ಹೇಳಿದೆ. ಈ ಮಾತನ್ನು ತುಸು ಬಿಡಿಸಿಕೊಳ್ಳೋಣ. "ಯಾವಾಗ ಉಚ್ಚನೀಚ ವಸ್ತುಗಳಲ್ಲೆಲ್ಲಾ 'ಬ್ರಹ್ಮ'ವನ್ನೇ ನೋಡುತ್ತಾನೆಯೋ ಆಗ ಅವನ ಹೃದಯಗ್ರಂಥಿ ನಾಶವಾಗುತ್ತದೆ. ಎಲ್ಲ ಬಗೆಯ ಸಂಶಯಗಳೂ ಕಳಚಿಕೊಳ್ಳುತ್ತವೆ. ಅಲ್ಲಿ ಕರ್ಮಗಳೂ ಕ್ಷೀಣಗೊಳ್ಳುತ್ತವೆ" ಇಲ್ಲಿ ವಿಚಾರಸರಣಿಯ ಉನ್ನತ ನೆಲೆ ನಮಗೆ ಕಾಣುತ್ತದೆ. ಇಲ್ಲಿ 'ಹೃದಯಗ್ರಂಥಿ' ಎಂಬ ಮಾತಿದೆಯಷ್ಟೆ. ಈ ಗ್ರಂಥಿಗೆ ಅಜ್ಞಾನ ಮತ್ತು ಪ್ರಪಂಚವನ್ನು ಅನುಭವಿಸುತ್ತಿರಲೇ ಬೇಕೆಂಬ ಆಸೆ. ಆದರೆ, ನಿಜವಾದ ಜ್ಞಾನಿಗೆ ಇದೆಲ್ಲಾ ಸ್ವಪ್ನಸದೃಶ!

ನಾವು ಈಗ ವಿಚಾರದ ನೆಲೆಗೆ ಬರೋಣ. ನಾವು ವಿಚಾರಗಳನ್ನು 'ಕರಣತ್ರಯ'ಗಳನ್ನು ನೆಮ್ಮಿಕೊಂಡೇ ಮಾಡುತ್ತಿರುತ್ತೇವೆ. ನಮ್ಮದೆಲ್ಲಾ ಸಂಶಯದ ಗಂಟುಗಳೇ. ನಾವು 'ಗಂಟು'ಗಳನ್ನು ಹಾಕಿಕೊಂಡೇ ಸಂತೋಷಿಸುತ್ತೇವೆ. ಇದು ಇರುವವರೆಗೂ ನಿಜವಾದ 'ವಿಚಾರ'ಗಳು ನಮ್ಮಲ್ಲಿ ತಲೆದೋರುವುದಿಲ್ಲ. ಅವಿದ್ಯೆಯು ವಿದ್ಯೆಯನ್ನು ಆವರಿಸಿಕೊಳ್ಳುತ್ತದೆ. ಅವಿದ್ಯೆಯ ದಮನವಾಗದೆ ವಿದ್ಯೆಗೆ ಬೆಲೆ ಬರುವುದಿಲ್ಲವಷ್ಟೆ. ನಾವು ಅವಿದ್ಯೆಯೆಂಬ ಮೂಟೆಯನ್ನು ಹೊತ್ತು ನಿಂತಿದ್ದೇವೆ. ಹೀಗೆ ನಿಂತಿರುವುದೇ 'ಸತ್ಯ'ವೆಂದು ನಂಬಿಬಿಟ್ಟಿದ್ದೇವೆ! ನಮ್ಮ ಅನೇಕ ನಿಲುವುಗಳ ಹಿಂದಿರುವ ಸತರ್ಕದ ವಿಚಾರಪ್ರಣಾಲಿಯನ್ನು ನಾವು ಮರೆತಿದ್ದೇವೆ. ಸತರ್ಕವು ನಮ್ಮನ್ನು ವಿಚಾರದ ನೆಲೆಗಳ ಕಡೆ ಕರೆದೊಯ್ಯುತ್ತದೆ. ಗೀತೆಯ ಕೊನೆಗೆ ಶ್ರೀಕೃಷ್ಣ ಹೇಳುವ ಮಾತು ಮನನೀಯ: 'ವಿಮೃಶ್ಯೈತ್ ಅಶೇಷೇಣ ಯಥಾ ಇಚ್ಛಸಿ ತಥಾ ಕುರು' ಸ್ವಲ್ಪವೂ ಬಿಡದೆ ವಿಚಾರ ಮಾಡು. ಸತರ್ಕದ ವಿಚಾರದಿಂದ ಯಾವುದು ತದ್ಗತವೋ ಅದನ್ನು ಹಿಡಿದು ನಡೆ. ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ತಿಳಿಯೋಣ. 'ಯೋಗವಾಸಿಷ್ಠ'ವು ಅದ್ವಯವಾದಿ ಗ್ರಂಥವಷ್ಟೆ. ಸುತೀಶಣನೆಂಬ ಬ್ರಾಹ್ಮಣನಿಗೆ ಸಂಶಯಗಳು ಉಂಟಾಗಿ ಮನಸ್ಸು ಹೊಯ್ದಾಡುತ್ತದೆ. ಅವನು ಅಗಸ್ತಿ ಎಂಬ ಮುನಿವರನ ಆಶ್ರಮಕ್ಕೆ ಹೋಗಿ ತನಗೆ ಬಂದ ಸಂಶಯಗಳನ್ನು ಮುನಿವರನಿಂದ ಪರಿಹರಿಸಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಈ ಕೃತಿಗೆ ಬರೆದ ವ್ಯಾಖ್ಯಾನವೊಂದರಲ್ಲಿ 'ಬ್ರಹ್ಮವಿದ್ಯೆಯ ಮುಖ್ಯಾಧಿಕಾರ ಬ್ರಾಹ್ಮಣರಿಗೆ ಮಾತ್ರ' ಎಂದು ಹೇಳಲಾಗಿದೆ. ಇಂಥ ವಿಚಾರ ಏಕಪಾರ್ಶ್ವದ ದೃಷ್ಟಿಯಿಂದ ಬಂದದ್ದು. ಬ್ರಹ್ಮವಿದ್ಯೆಯ ಅಧಿಕಾರ ಎಲ್ಲರಿಗೂ ಉಂಟು. ಧರ್ಮಕ್ಕೆ ಎರಡು ಮುಖವುಂಟು. ಅವು ಪ್ರವೃತ್ತಿ ನಿವೃತ್ತಿ ಎಂದು. ಪ್ರವೃತ್ತಿಧರ್ಮ ಶ್ರೇಯಸ್ಸನ್ನು ಅಪೇಕ್ಷಿಸುತ್ತದೆ. ಇದು ಕರ್ಮಕಾಂಡಕ್ಕೆ ಸೇರಿದ್ದು. ಶ್ರೇಯೋರೂಪಿಯಾದ ಪ್ರವೃತ್ತಿಧರ್ಮವನ್ನು ಆರಾಧಿಸುವಾಗ ವರ್ಣಾಶ್ರಮಕ್ಕೆ ಅನುಗುಣವಾದ ಅಧಿಕಾರವನ್ನು ನಿರ್ಣಯಿಸಬೇಕಾಗುತ್ತದೆ.

ಆದರೆ, ನಿವೃತ್ತಿರೂಪೀ ಧರ್ಮವನ್ನು ಆರಾಧಿಸುವಾಗ ಶ್ರೇಯಪ್ರೇಯ ಎಂಬ ವಿಭಾಗಕ್ಕೆ ಅವಕಾಶವಿಲ್ಲ. ಇಲ್ಲಿ ಅಧಿಕಾರದ ಪ್ರಶ್ನೆಯೇ ಬರುವುದಿಲ್ಲ. ಯಾರಿಗೆ ಏನು ಬೇಕೋ ಅದನ್ನು ಯಾರು ಬೇಕಾದರೂ ಪಡೆಯಬಹುದು. ಆತ್ಮತತ್ವವನ್ನು ಒಪ್ಪಿರುವಾಗ ಚಿದಾತ್ಮಕನು ಸಹಜವಾದ 'ಚಿಚ್ಛಕ್ತಿ'ಯನ್ನು ಬೆಳೆಸಿಕೊಳ್ಳುವುದರಲ್ಲಿ ಅಧಿಕಾರ ಇಲ್ಲವೆಂದರೆ ಹೇಗೆ? ದ್ವಿಜೇತರರಲ್ಲಿ ಜ್ಞಾನಿಗಳು ಹಿಂದೆ ಇದ್ದರು; ಈಗಲೂ ಇದ್ದಾರೆ. ಇದು ಸತರ್ಕದ ವಿಚಾರ. ಧರ್ಮಕ್ಕೆ ಮೂರು ಬುಡಗಳುಂಟು. ಜ್ಞಾನ, ಕರ್ಮ ಮತ್ತು ಉಪಾಸನಾ. ಜ್ಞಾನವು ನಿವೃತ್ತಿರೂಪವಾದುದು. ಅದು ಧರ್ಮಾಭಿವೃದ್ಧಿಗೆ ಕಾರಣ. ಕರ್ಮೋಪಾಸನೆಯು ಪ್ರವೃತ್ತಿರೂಪ ಧರ್ಮಾಭಿವೃದ್ಧಿಗೆ ಕಾರಣ. ಈ ವಿಚಾರಪ್ರಣಾಲಿಯನ್ನು ಮರೆಯಕೂಡದು. ಉಪಾಸನೆ ಎಲ್ಲರಿಗೂ ಸೇರಿದ್ದು. 'ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ' ಎಂಬ ಮಾತು ವಿಚಾರತತ್ವದ ಕೀಲಿಕೈಯಾಗಿದೆ. ಯಾರಲ್ಲಿ ಸತ್ವರೂಪವುಂಟೋ ಅಂಥವನು ಶ್ರದ್ಧೆಯಿಂದ 'ಬ್ರಹ್ಮವಿದ್ಯೆ'ಯನ್ನು ಗಳಿಸಿಕೊಳ್ಳಬೇಕು. ಇದು ಸನಾತನ ಸತರ್ಕ ವಿಚಾರ!

ವಿಚಾರ ಎಂಬಲ್ಲಿ ಗತಿಸೂಚಕವಾದ ಅರ್ಥವುಂಟು. ನಾವು ಹೆದ್ದಾರಿಯನ್ನು ಹಿಡಿದು ನಡೆಯಬೇಕು. ವಿಶ್ವಾಮಿತ್ರ ಹುಟ್ಟಿನಿಂದ ಕ್ಷತ್ರಿಯ ಪ್ರವೃತ್ತಿಯಿಂದ ಬ್ರಹ್ಮಸಾಧಕ! ಈ ಮಾತನ್ನು ನೂರಾರು ಜನರಿಗೆ ಕಂಠೋಕ್ತವಾಗಿ ಹೇಳಬಹುದು. 'ಬ್ರಾಹ್ಮಣ' ಎಂಬುದು ಜಾತಿ ಅಥವ ವರ್ಣಸೂಚಕವಲ್ಲ. ಯಾರು ದೊಡ್ಡದ್ದನ್ನು ಹಿಡಿದು ಸಾಧಿಸಿ, ದೊಡ್ಡವರಾಗಬೇಕೆಂಬ ಅಭೀಪ್ಸೆ ಯಾರಿಗುಂಟೋ ಅಂಥವರೆಲ್ಲ ಬ್ರಾಹ್ಮಣರೇ, ಬ್ರಹ್ಮವಿದರೇ. ಇದು ಸ್ವಭಾವಸಿದ್ಧವಾದ ಮಾತು. ನಾವು ಈ 'ಎಳೆ'ಯನ್ನು ಹಿಡಿದಾಗ ಸದ್ಧರ್ಮ, ಸತ್ತರ್ಕ, ಸುವಿಚಾರ–ಎಂಬ ಮಾತುಗಳಿಗೆ ಹಸನಾದ ನೆಲೆ ಒದಗಿ ಬರುತ್ತದೆ. ನಾವು ಬೆಳೆಯನ್ನು ಬೆಳೆಸುವಾಗ, ಕಳೆ ಬರುವುದುಂಟು. ಆ ಕಳೆಯು ಬೆಳೆಯನ್ನು ನಾಶಪಡಿಸಿಬಿಡುತ್ತದೆ. ಹಾಗಾಗದಂತೆ ನೋಡಿಕೊಳ್ಳುವುದೇ ಸದ್ಧರ್ಮ. ಇಂಥ ಸದ್ಧರ್ಮದಿಂದ ಕೂಡಿದ ಸತರ್ಕವು ವಿಚಾರವಂತರಿಂದ ಬೆಳೆಯಲು ಸಾಧ್ಯ. ನಮ್ಮ ಕಾಲವು ಇಂಥ ಸದ್ಧರ್ಮದಿಂದಲೂ ಸತ್ತರ್ಕದಿಂದಲೂ ಬೆಳೆಯಬೇಕಾಗಿದೆ.

■ ಪುರಂಜೇವಿ

## ಮಾತೇ ಮುತ್ತು

- ನಾವು ಏನನ್ನು ಸಾಧಿಸುವ ಸಾಧ್ಯತೆ ಇರುತ್ತದೆಯೋ ಅವೆಲ್ಲವನ್ನೂ ಸಾಧಿಸಿದಲ್ಲಿ, ನಾವೇ ಆಶ್ಚರ್ಯಚಕಿತರಾಗುತ್ತೇವೆ!

  –ಥಾಮಸ್ ಆಲ್ವ ಎಡಿಸನ್

- ನಾವು ಯಾವುದನ್ನು ಕುರಿತು ಚಿಂತಿಸುತ್ತಿದ್ದೇವೆಯೋ ಅದರ ಪ್ರಾಮುಖ್ಯತೆಯನ್ನು ಸರಿಯಾಗಿ ವಿಚಾರ ಮಾಡಿದಲ್ಲಿ ನಮ್ಮ ಚಿಂತೆ ತಾನಾಗಿಯೇ ಕಡಿಮೆಯಾಗುತ್ತದೆ!

  –ಬರ್ಟ್ರಂಡ್ ರಸೆಲ್

- ವಿಮರ್ಶಕರನ್ನು ಸಂತೋಷಪಡಿಸುವುದಕ್ಕಿಂತ, ಸಾಮಾನ್ಯ ಪ್ರೇಕ್ಷಕರನ್ನು ಸಂತೋಷಪಡಿಸಲಿಕ್ಕೆ ನಾನು ಇಷ್ಟಪಡುತ್ತೇನೆ.

  –ವಾಲ್ಟ್ ಡಿಸ್ನಿ

- ಅಧ್ಯಾತ್ಮರಹಿತ ವಿಜ್ಞಾನ ಕುಂಟಾಗಿರುತ್ತದೆ ಮತ್ತು ವಿಜ್ಞಾನರಹಿತ ಅಧ್ಯಾತ್ಮ ಕುರುಡಾಗಿರುತ್ತದೆ.

  – ಅಲ್ಬರ್ಟ್ ಐನ್‌ಸ್ಟೀನ್

- ನಿನ್ನ ಮನಸ್ಸನ್ನಾಳು, ಇಲ್ಲದಿದ್ದರೆ ಅದು ನಿನ್ನನ್ನಾಳೀತು.

  –ಹೋರೇಸ್

- ಯುದ್ಧಕ್ಕೆ ಅಂತ್ಯವನ್ನು ತರಬೇಕು, ಇಲ್ಲದಿದ್ದರೆ ಯುದ್ಧ ಎಲ್ಲರಿಗೂ ಅಂತ್ಯವನ್ನು ತರುತ್ತದೆ.

  –ಜಾನ್ ಕೆನಡಿ

- ದುರ್ಬಲರಿಗೆ ಕ್ಷಮಿಸುವ ಹಕ್ಕಿಲ್ಲ, ಕ್ಷಮಿಸುವ ಶಕ್ತಿ ಮತ್ತು ಹಕ್ಕಿರುವುದು ಬಲಿಷ್ಠರಿಗೆ ಮಾತ್ರ.

  –ಮಹಾತ್ಮ ಗಾಂಧಿ